## 28

# ಯೇಸು ಅವರ ಪಾದಗಳನ್ನು ತೊಳೆದನು

## (13:1-17)

ಅದು 1983ನೆಯ ವರ್ಷವಾಗಿತ್ತು, ಮತ್ತು ಪುರುಷರ ರಿಟ್ರೀಟಿನಲ್ಲಿ ಪ್ರಸ್ತುತ ಪಡಿಸುವದಕ್ಕಾಗಿ, ಈ ಪಠ್ಯವು, 13:1-17 ನನಗೆ ಕೊಡಲ್ಪಟ್ಟಿತು. ಒಂದು ದೊಡ್ಡ ಊಟದ ಕೋಣೆಯಲ್ಲಿ ಕಲ್ಲಿನ ಬೆಂಕಿ ಸ್ಥಳದ ಮುಂದೆ ಪ್ರತಿಯೊಬ್ಬರು ಕುಳಿತು ಕೊಂಡಿದ್ದರು. ಪಾಠವನ್ನು ಪ್ರಾರಂಭಿಸುವದಕ್ಕೆ, ನಾನು ಒಂದು ಬೋಗೋಣಿಯನ್ನು ಮತ್ತು ಒಂದು ಟವಲನ್ನು ತೆಗೆದು ಕೊಂಡು, ನನ್ನ ದೃಷ್ಟಾಂತಕ್ಕೆ ಸಹಾಯ ಮಾಡುವೆನೆಂದು ಮೊದಲೇ ಒಪ್ಪಿಕೊಂಡಿದ್ದ ಗುಂಪಿನ ಒಬ್ಬ ಸದಸ್ಯನ ಕಡೆಗೆ ನಡೆದು ಹೋದೆನು. (ನಾನು ಬೇರೊಬ್ಬರನನ್ನು ಕೇಳಿಕೊಂಡಿದ್ದೆನು, ಆದರೆ ಅವನು ಅದು "ಬಹಳ ಪೇಚಾಟವನ್ನುಂಟು ಮಾಡುತ್ತದೆ" ಎಂದು ಹೇಳಿದನು.) ಆ ಮನುಷ್ಯನ ಮುಂದೆ ನಾನು ಮೊಣಕಾಲೂರಿ, ಅವನ ಶ್ಯೂಗಳನ್ನು ಕಾಲಚೀಲವನ್ನು ತೆಗೆದು ಹಾಕಿದಾಗ ಮತ್ತು ನಾನು ಅವನ ಪಾದಗಳನ್ನು ತೊಳೆದಾಗ ಸಂಪೂರ್ಣ ಮೌನವು ಕೋಣೆ ಯನ್ನು ಆವರಿಸಿತ್ತು. ಆ ಘಟನೆಯು ಪ್ರತಿಯೊಬ್ಬರನ್ನು ದುರ್ಬಲರನ್ನಾಗಿ ಮಾಡುತ್ತದೆ - ಇಲ್ಲವೇ ನನ್ನನ್ನು ಸಹ ಹೇಗೆ ದುರ್ಬಲರನ್ನಾಗಿ ಮಾಡುತ್ತದೆ ಎಂಬುದನ್ನು ನಾನು ನಿರೀಕ್ಷಿಸಲಿಲ್ಲ. ಯೇಸುವು ತನ್ನ ಶಿಷ್ಯರಿಗೆ ಇದನ್ನೇ ಹೇಗೆ ಮಾಡಿದ್ದನೆಂಬುದರ ಬಗ್ಗೆ ಓದಿದರೂ, ಅದರ ಬಗ್ಗೆ ಕೇಳಿದ್ದರೂ, ಮತ್ತು ಮಾತಾಡದರೂ, ವ್ಯಕ್ತಿಯಲ್ಲಿ ಅದನ್ನು ಮಾಡಿದಾಗ ಅದು ಒಂದು ರೀತಿ ಯಲ್ಲಿ ಭಯಪಡಿಸುವಂಥದ್ದಾಗಿತ್ತು. ಪುರುಷರ ರಿಟ್ರೀಟಿನ ಆ ರಾತ್ರಿಯನ್ನು ನಾನು ಹಿಂದಿರುಗಿ ನೋಡಿದಾಗ, ಆಧುನಿಕ ಪಾದ ತೊಳೆಯುವಿಕೆಯು, ಯೇಸುವು ತನ್ನ ಜೀವನದ ಅಂತ್ಯದಲ್ಲಿ, "ತನ್ನ ಶಿಷ್ಯರ ಪಾದಗಳನ್ನು ತೊಳೆಯಲು ಪ್ರಾರಂಭಿಸಿದಾಗ" (13:5) ಆದ ಭಯಪಡಿಸುವ, ವಿರೂಪದ ಮತ್ತು ಪೇಚಿನಲ್ಲಿ ಸಿಲುಕಿಸುವದಕ್ಕೆ ಪರಿಪೂರ್ಣವಾದ ಪೀಠಿಕೆಯಾಗಿದೆಯೆಂದು ನಾನು ನಂಬುತ್ತೇನೆ.

ಪಸ್ಕ ಹಬ್ಬಕ್ಕೆ ಸ್ವಲ್ಪ ಮೊದಲು (13:1),[1] ಯೇಸುವು ತನ್ನ ಶಿಷ್ಯರೊಂದಿಗೆ ಒಂದು ಊಟಕ್ಕಾಗಿ ಕೂಡಿ ಬಂದನು. ಆ ದಿನ ಬೇಥಾನ್ಯದಿಂದ ಪ್ರಯಾಣವು ಧೂಳುತುಂಬಿದ ಹಾದಿಗಳ ಮೇಲಿತ್ತು ಮತ್ತು ಸಂಭಾಷಣೆಯು ಸತತವಾಗಿತ್ತು.[2] ಆ ಸಾಯಂಕಾಲದಲ್ಲಿ ಅವರು ಊಟಮಾಡಲು ಮೇಜಿನ ಕಡೆಗೆ ಒರಗಿ ಕೊಂಡಿದ್ದಾಗ, ಅವರು ತೊಳೆದು ಕೊಳ್ಳದ ಪಾದಗಳಿಂದ ಹಾಗೆ ಒರಗಿದರು. ಜನರು ಒಂದು ಮೊಣಕೈ ಮೇಲೆ ಆತು ಕೊಂಡು, ನೆಲದ ಮೇಲೆ ಒರಗಿಕೊಳ್ಳುವ ಸಂಸ್ಕೃತಿಯಲ್ಲಿ, ಒಬ್ಬ ವ್ಯಕ್ತಿಯ ಹೊಲಸಾದ ಪಾದಗಳು ಪಕ್ಕದಲ್ಲಿರುವವನಿಗೆ ಗಂಭೀರವಾದ ವಿಷಯವಾಗಿರುತ್ತದೆ! ತೊಳೆಯುವದಕ್ಕಾಗಿ ಒಂದು ಬೋಗೋಣಿ ಮತ್ತು ಒಂದು ಟವಲ್ ಕೋಣೆಯಲ್ಲಿ ಲಭ್ಯವಿದ್ದವು. ಆದರೆ ತೊಳೆಯುವ ಕೆಲಸ ಮಾಡಲು ಸೇವಕರು ಇರಲಿಲ್ಲ. ಅದರ ಪರಿಣಾಮವಾಗಿ ದಿನದ ಧೂಳು ತಮ್ಮ ಪಾದಗಳ ಮೇಲೆ ಇರುವಂತೆಯೇ ಅವರು ಊಟವನ್ನು ಪ್ರಾರಂಭಿಸಿದರು. ಊಟವು ಪ್ರಗತಿಯಲ್ಲಿದ್ದಾಗ, ಯೇಸುವು ಎದ್ದು ನಿಂತುಕೊಂಡನು. ಟವಲನ್ನು ನಡುವಿಗೆ ಸುತ್ತಿ ಕೊಂಡನು, ಬೋಗೋಣಿಯಲ್ಲಿ ನೀರನ್ನು ಸುರಿದನು, ತನ್ನ ಶಿಷ್ಯರ ಪಾದಗಳನ್ನು ತೊಳೆಯಲು ಮತ್ತು ತನ್ನ ಟವಲ್‌ನಿಂದ ಒರೆಸಲು ಪ್ರಾರಂಭಿಸಿದನು. ನಿಶ್ಚಯವಾಗಿಯೂ, ಯೇಸುವು ಒಬ್ಬ ಶಿಷ್ಯನಿಂದ ಇನ್ನೊಬ್ಬ ಶಿಷ್ಯನ ಬಳಿಗೆ ಹೋಗುವಾಗ ನಾಚಿಕೆ ಪಡಿಸುವ ಮೌನವು ಕೋಣೆಯನ್ನು ತುಂಬಿಕೊಂಡಿತ್ತು. ಕೋಣೆ

ಯಲ್ಲಿ ಎಲ್ಲ ಜನರಿದ್ದರೂ, ಯೇಸುವು ಯಾಕೆ ಪ್ರತಿಯೊಬ್ಬನ ಪಾದಗಳನ್ನು ಯಾಕೆ ತೊಳೆದನು?

ಆ ರಾತ್ರಿಯಲ್ಲಿ ಯೇಸುವು ಕೊಳೆಯಾದ ಪಾದಗಳನ್ನು ಸ್ವಚ್ಛಪಡಿಸುವದಕ್ಕಿಂತ ಹೆಚ್ಚಿನದನ್ನು ಮಾಡುತ್ತಿದ್ದನು. ಯೇಸುವು ತನ್ನ ಶಿಷ್ಯರನ್ನು ತನ್ನ ಮರಣಕ್ಕಾಗಿ ಮತ್ತು ಅವರ ಸೇವೆಗಾಗಿ ಸಿದ್ಧತೆ ಮಾಡುತ್ತಿದ್ದನು. ಶಿಷ್ಯರ ಪಾದಗಳನ್ನು ತೊಳೆಯುವುದು, ಆತನು ಶಿಲುಬೆಯ ಮೇಲೆ ಬೇಗನೇ ಮಾಡಲಿಕ್ಕಿದ್ದ ಯಜ್ಞದ ನೆರಳಾಗಿತ್ತು. ಯೇಸುವಿನ ರಕ್ತದ ಮುಖಾಂತರ ಸಾಧ್ಯವಾಗಿ ಮಾಡಲ್ಪಡುವ ಶುದ್ಧೀಕರಣಕ್ಕೆ ಮತ್ತು ದೇವರ ರಾಜ್ಯದ ನೂತನ ಮೌಲ್ಯಗಳ ನೆರಳಾಗಿತ್ತು. ಕ್ರೈಸ್ತ ಸೇವೆಯ ಸ್ವಭಾವವನ್ನು ತನ್ನ ಶಿಷ್ಯರಿಗೆ ಬೋಧಿಸಲು ಯೇಸುವು ಪಾದಗಳನ್ನು ತೊಳೆಯುವ ದೈಹಿಕ ಉದಾಹರಣೆಯನ್ನು ಉಪಯೋಗಿಸಿದನು.

## ಸೇವೆಯು ಪ್ರೀತಿಯ ವ್ಯಕ್ತಪಡಿಸುವಿಕೆಯಾಗಿದೆ (13:1)

13ನೆಯ ಅಧ್ಯಾಯವು ಯೋಹಾನನ ಸುವಾರ್ತೆಯಲ್ಲಿ ಒಂದು ಹೊಸ ಭಾಗವನ್ನು ಪ್ರಾರಂಭಿಸುತ್ತದೆ. 13ರಿಂದ 17ನೆಯವರೆಗಿನ ಅಧ್ಯಾಯಗಳು ಯೇಸುವಿನ "ಬೀಳ್ಕೊಡುವಿಕೆಯ ಉಪದೇಶ" ಎಂದು ಸಾಮಾನ್ಯವಾಗಿ ಕರೆಯಲ್ಪಟ್ಟಿವೆ. ಆತನ ಮೊದಲಿನ ಸೇವೆಯ ಕೇಂದ್ರೀಕರಿಸುವಿಕೆಯಾಗಿದ್ದ ಬಹಿರಂಗ ಬೋಧನೆಗೆ ವಿರುದ್ಧವಾಗಿ, ಈ ವಿಭಾಗವು ಪ್ರತ್ಯೇಕವಾದ, ಯೇಸುವಿನ ಮತ್ತು ಆತನ ಶಿಷ್ಯರ ಮಧ್ಯದಲ್ಲಿಯ ನಿಕಟವಾದ ಸಂಭಾಷಣೆಗಳನ್ನು ವಿವರಿಸುತ್ತದೆ. ಈ ವಿಭಾಗದಲ್ಲಿಯ ಒಂದು ಭಿನ್ನತೆಯು, ಮೊದಲಿಗಿಂತ "ಪ್ರೀತಿ" ಎಂಬ ಶಬ್ದವು ಹೆಚ್ಚು ಸಲ ಕಂಡು ಬರುವಂಥದ್ದಾಗಿದೆ. ಅಧ್ಯಾಯ 1ರಿಂದ 12ರ ವರೆಗಿನ ಅಧ್ಯಾಯಗಳಲ್ಲಿ ಪ್ರೀತಿಗೆ, ಕೇವಲ ಆರು ಉಲ್ಲೆಖಗಳು ಒಳಗೊಂಡಿವೆ! ಆದರೆ 13ರಿಂದ 17ನೆಯ ಅಧ್ಯಾಯಗಳು ಮೂವತ್ತೊಂದು ಸಲ ಪ್ರೀತಿಯನ್ನು ನಮೂದಿಸುತ್ತವೆ! ಆ ಸಂಭವಿಸುವಿಕೆಗಳಲ್ಲಿ ಎರಡು, ಹದಿಮೂರನೆ ಅಧ್ಯಾಯದ ಮೊದಲಿನ ವಚನದಲ್ಲಿ ಇರುತ್ತವೆ.

ತನ್ನ ಶಿಷ್ಯರ ಪಾದಗಳನ್ನು ಯೇಸುವು ಯಾಕೆ ತೊಳೆದನು ಇಲ್ಲವೇ ಶಿಲುಬೆಯ ಮೇಲೆ ಆತನು ಯಾಕೆ ಮರಣ ಹೊಂದಿದನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾದರೆ, ಆತನ ಪ್ರೀತಿಯನ್ನು ಅರ್ಥಮಾಡಿಕೊಳ್ಳುವದರಿಂದ ನಾವು ಪ್ರಾರಂಭಿಸತಕ್ಕದ್ದು: "... ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು" (13:1). ಯೇಸುವಿನ ಕಾರ್ಯವನ್ನು ಅರ್ಥಮಾಡಿಕೊಳ್ಳುವ ಮೊದಲು ಆ ಕಾರ್ಯಗಳನ್ನು ಉತ್ಪಾದಿಸಿದ ಹೃದಯವನ್ನು ನಾವು ಮೊದಲು ಮೆಚ್ಚಿಕೊಳ್ಳಬೇಕು. ಯೇಸುವಿನ ಹೃದಯವು ಆತನು ಶಿಷ್ಯರ ಪದಗಳನ್ನು ತೊಳೆಯುತ್ತಿದ್ದಂತೆ ಪ್ರೀತಿಯಿಂದ ತುಂಬಲ್ಪಟ್ಟಿತ್ತು. ಅದು ಕೋಪದಿಂದ, ನಿರಾಶೆಯಿಂದ ಹತಾಶೆಯಿಂದ ಇಲ್ಲವೇ ಅಸಹ್ಯತೆಯಿಂದ ತುಂಬಿರಲಿಲ್ಲ; ಅದು ಪ್ರೀತಿಯಿಂದ ತುಂಬಲ್ಪಟ್ಟಿತ್ತು. ಯೇಸುವು ಸೇವೆಮಾಡಿದಂತೆ ಸೇವೆ ಮಾಡಲು ನಾವು ಬಯಸಿದರೆ, ನಾವೂ ಸಹ ಪ್ರೀತಿಯಿಂದ ಪ್ರಾರಂಭಿಸುವುದು ಮಹತ್ವದ್ದಾಗಿದೆ. ಯೇಸುವು ಸೇವೆ ಮಾಡಿದಂತೆ ನಾವು ಸೇವೆ ಮಾಡತಕ್ಕದ್ದು ಎಂದು ಒತ್ತಾಯ ಮಾಡುವ ಅನೇಕರು ಯೇಸುವು ಪ್ರಾಂರಭಮಾಡಿದ್ದಲ್ಲಿ, ಪ್ರೀತಿಯ ಹೃದಯದಿಂದ ಪ್ರಾರಂಭಸಲು ಸಿದ್ಧರಾಗಿರುವದಿಲ್ಲ.

ಇದೇ ಅಧ್ಯಾಯದಲ್ಲಿ ಅನಂತರದಲ್ಲಿ, ಪ್ರೀತಿಯು ಹೇಗೆ ದೇವರ ರಾಜ್ಯದ ತಿರುಳಾಗಿದೆ ಎಂಬುದನ್ನು ಯೇಸುವು ವಿವರಿಸಿದನು:

> ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ, ಏನೆಂದರೆ ನೀವು ಒಬ್ಬರನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸದಮೇರೆಗೆ ನೀವೂ ಸಹ

> ಒಬ್ಬರನೊಬ್ಬರು ಪ್ರೀತಿಸಬೇಕು ಎಂಬುದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿ ಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದು ಕೊಳ್ಳುವರು (13:34, 35).

ಸೇವೆಯು, ಅದು ಯಥಾರ್ಥವಾದ ಕ್ರೈಸ್ತ ಸೇವೆ ಆಗಿರಬೇಕಾಗಿದ್ದರೆ, ಅದು ಪ್ರೀತಿಯಿಂದ ಪ್ರಾರಂಭವಾಗಬೇಕು.

ನಾವು ಮಾಡುವದಕ್ಕೆ ಪ್ರೀತಿಯು ಪ್ರೇರೇಪಿಸುವದಕ್ಕೆ ಮಿತಿಯಿರುವದಿಲ್ಲ. ಅಪ ರಾಧಿ ಮನೋಭಾವನೆಯಿಂದ, ಭಯದಿಂದ, ಇಲ್ಲವೇ ಗರ್ವದಿಂದ ನಾವು ಸೇವೆ ಮಾಡಿದರೆ, ನಮ್ಮ ಸೇವೆಯು ಬಿದ್ದು ಹೋಗುವುದು, ನಮಗೆ ಪ್ರೀತಿಯ ಹೃದಯವಿರುವ ಕಾರಣ ಅದು ಇರುವ ರೀತಿಗಿಂತ ಬೇರೆಯಾಗಿರುವುದು. ಒಂದು ಸಲ ಕ್ರೈಸ್ತ ಮಿಶನ್ ಆಸ್ಪತ್ರೆಯಲ್ಲಿ ರೋಗಿ ಯಾಗಿದ್ದ ಒಬ್ಬ ಮನುಷ್ಯನು ಆಸ್ಪತ್ರೆಯಲ್ಲಿ ಇಡೀ ದಿನ ಕೆಲಸ ಮಾಡುತ್ತಿದ್ದ ನರ್ಸುಗಳನ್ನು ಗಮನಿಸಿದನು. ಒಂದು ದಿನ ಅವನು ಒಬ್ಬ ನರ್ಸಿಂಗ್, “ಮಿಲಿಯನ್ ಡಾಲರ್ ಕೊಟ್ಟರೂ ನಿಮ್ಮ ಕೆಲಸವನ್ನು ನಾನು ಮಾಡಲಾರೆನು!” ಎಂದು ಹೇಳಿದನು. ಕ್ರೈಸ್ತ ನರ್ಸ್ ಸ್ವಲ್ಪ ತಡೆದು, ಆ ಮನುಷ್ಯನ ಕಡೆಗೆ ಮುಗುಳ್ನಗೆ ಬೀರಿ, “ನಾನೂ ಅದನ್ನು ಮಾಡಲಾರೆ” ಎಂದು ಹೇಳಿದಳು. ಬೇರಾವುದೂ ಪ್ರೇರೇಪಿಸದಂಥ ಸೇವೆಯಲ್ಲಿ ನಮ್ಮನ್ನು ತೊಡಗಿಸಲು ಪ್ರೀತಿಯು ನಮ್ಮನ್ನೂ ಪ್ರೇರೇಪಿಸುತ್ತದೆ.

## ಸೇವೆಯು ಭರವಸೆಯಿಂದ ಹೊರಟು ಬರುತ್ತದೆ (13:2-4)

ವರ್ಷಗಳ ಹಿಂದೆ ನಾನು ಆಫ್ರಿಕಾದಲ್ಲಿದ್ದಾಗ, ನನ್ನ ಒಬ್ಬ ಜೊತೆ ಮಿಶನರಿಯು ತನ್ನ ಭಾಷಾ ಸಹಾಯಕನೊಂದಿಗೆ ಕೆಲಸ ಮಾಡುತ್ತ, ಸ್ಥಳಿಕ ಭಾಷೆಯಲ್ಲಿ ಕ್ರೈಸ್ತ ಸೇವೆಯ ವಿಚಾರವನ್ನು ಭಾಷಾಂತರಿಸಲು ಪ್ರಯತ್ನಿಸುತ್ತಿದ್ದನು. ಅವನ ಪ್ರಸಂಗದಲ್ಲಿ “ಎಲ್ಲಾ ಕ್ರೈಸ್ತರೂ ಸೇವಕರಾಗತಕ್ಕದ್ದು” ಎಂದು ಹೇಳುವ ಅಂಶಕ್ಕೆ ಬಂದಾಗ, ಅವನ ಸಹಾಯಕನು, “ಇಲ್ಲ! ನೀನು ಈ ರೀತಿ ಅರ್ಥಮಾಡಲಿಕ್ಕಾಗುವದಿಲ್ಲ!” ಎಂದು ಹೇಳಿದನು. ಯೇಸುವಿನ ಬಗ್ಗೆ ಅನೇಕ ವರ್ಷಗಳಿಂದ ಈ ಮನುಷ್ಯನು ಕೇಳಿದ್ದರೂ, ಪ್ರಸಂಗಿಯು ಕ್ರೈಸ್ತರು ಹೀನಾಯವಾ ಗಿರುವಂಥ ಒಬ್ಬ ಸೇವಕನಾಗುವಂತೆ ಕೇಳುವ ಸಾಧ್ಯತೆಯನ್ನು ನಂಬಲಿಲ್ಲ.

“ಸೇವೆ ಮಾಡು,” “ಸೇವಕ,” “ಸೇವೆ” - ಇವೆಲ್ಲವೂ ಜಗತ್ತಿಗೆ “ಬಲಹೀನ” ಮಾತುಗಳಂತೆ ಕೇಳಿಸುವ ಶಬ್ದಗಳಾಗಿವೆ. ಅವು ಅವಿದ್ಯಾವಂತರಿಗಾಗಿ, ಬಡವರಿಗಾಗಿ, ಬಲಹೀನರಿಗಾಗಿ ಕೆಲಸಗಳನ್ನು ಸೂಚಿಸುತ್ತವೆ. ಸೇವೆಯು ಅದರ ಮೇಲೆ ಏಳಲಾರದವರಿ ಗಾಗಿರುವಂತೆ ಸಾಮಾನ್ಯವಾಗಿ ಯೋಚಿಸಲ್ಪಟ್ಟಿದೆ. ಒಬ್ಬನು ಸೇವೆ ಮಾಡಲು ಒತ್ತಾಯಿ ಸಲ್ಪಡುವರಿಂದಲೇ ಮಾತ್ರ ಸೇವೆ ಮಾಡುತ್ತಾನೆ.

ಹೀಗಿದ್ದರೂ, ಯೇಸವು ಅದೆಲ್ಲವನ್ನೂ ಸುತ್ತಲು ತಿರುಗಿಸಿದನು. ಶಿಷ್ಯರ ಪಾದಗಳನ್ನು ಆತನು ತೊಳೆದ ರಾತ್ರಿಯಲ್ಲಿ, ಆತನು ಬಲಹೀನನಾಗಿರಲಿಲ್ಲ, ಕೀಳಾದವನಾಗಿರಲಿಲ್ಲ, ಇಲ್ಲವೇ ಯಾವುದೇ ರೀತಿಯಲ್ಲಿ ಹನ್ನೆರಡು ಜನರಿಂದ ಭಯಪಡಿಸಲ್ಪಟ್ಟವನಾಗಿರಲಿಲ್ಲ. ಯೋಹಾನು ದಾಖಲೆ ಮಾಡಿದ್ದಾನೆ,

> ಯೇಸು ತನ್ನ ಕೈಯಲ್ಲಿ ತಂದೆ ಎಲ್ಲವನ್ನೂ ಕೊಟ್ಟಿದ್ದಾನೆಂತಲೂ ತಾನು ದೇವರ ಬಳಿಯಿಂದ ಹೊರಟು ಬಂದಿದ್ದು ಮತ್ತೆ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳಿದು ಕೊಂಡವನಾಗಿ ಊಟವನ್ನು ಬಿಟ್ಟು ಎದ್ದು ಹೊದಿದ್ದ ಮೇಲ್ಹೊದಿಕೆಯನ್ನು ತೆಗೆದಿಟ್ಟು ಕೈಪಾವುಡವನ್ನು ತೆಗೆದುಕೊಂಡು ನಡುವಿಗೆ ಕಟ್ಟಿಕೊಂಡನು (13:3, 4).

ಯೇಸುವು ಮಾಡಿದ್ದನ್ನು, ಆತನು ಭರವಸೆಯ ಮತ್ತು ಬಲದ ಸ್ಥಾನದಿಂದ ಮಾಡಿದನು. ಆತನು ಪ್ರದರ್ಶಿಸಿದ ಸೇವೆಯು ಬಲಹೀನತೆಯಲ್ಲಿ ಬೇರೂರಿರಲಿಲ್ಲ, ಆದರೆ ಬಲದ ಮೇಲೆ

ಅವಲಂಬಿಸಿತ್ತು. ಒಬ್ಬ ಕ್ರೈಸ್ತನು ದೇವರ ದೃಷ್ಟಿಯಲ್ಲಿ ಹೇಗೆ ಪ್ರೀತಿಸಲ್ಪಡುತ್ತಾನೆ ಮತ್ತು ಸ್ವಾಸ್ತವಾಗಿ ಇಡಲ್ಪಟ್ಟಿದ್ದಾನೆ ಎಂಬುದನ್ನು ನಿಜವಾಗಿ ಅರ್ಥಮಾಡಿಕೊಳ್ಳುವಾಗ, ಅವನಿಗೆ ಸೇವೆ ಮಾಡಲು ಭರವಸೆಯಿರುವುದು. ಯೇಸುವು ಶಿಷ್ಯರ ಪಾದಗಳನ್ನು ತೊಳೆದಾಗ ಆತನು ಇದನ್ನು ಮಾದರಿಯನ್ನಾಗಿ ಮಾಡಿದನು.

## ಸೇವೆಯು ದೇವರ ಸಂಪರ್ಕವುಳ್ಳದ್ದಾಗಿದೆ (13:1-5)

13ನೆಯ ಅಧ್ಯಾಯದಲ್ಲಿ ಹೆಚ್ಚು ಪ್ರಾಮುಖ್ಯವಾಗಿ ಕಂಡುಬರುವ ಇಬ್ಬರು ಶಿಷ್ಯರು ಯೂದ (ವಚನಗಳು 2, 18-30) ಮತ್ತು ಪೇತ್ರ (ವಚನಗಳು 31-38). ಇಬ್ಬರೂ ಯೇಸುವಿನಿಂದ ಪಾದಗಳನ್ನು ತೊಳೆಯಿಸಿಕೊಂಡವರಾಗಿದ್ದರು. ಮತ್ತು ಇಬ್ಬರೂ ಮುಂದಿನ ಕೆಲವೇ ತಾಸುಗಳೊಳಗಾಗಿ ಆತನಿಗೆ ಪ್ರಮುಖ ನಿರಾಶೆಗಳಾಗಿದ್ದರು; ಯೂದನು ಆತನನ್ನು ಹಿಡಿದು ಕೊಟ್ಟನು ಮತ್ತು ಪೇತ್ರನು ಆತನನ್ನು ಅಲ್ಲಗೆಳೆದನು. ಈ "ವಿವರವು" ನಿಜವಾಗಿಯೂ ಸೇವೆಯ ಸ್ವಭಾವದ ಬಗ್ಗೆ ಅದ್ಭುತಕರವಾಗಿ ಬಿಡುಗಡೆ ಮಾಡುವ ಪ್ರಕಟಣೆಯಾಗಿದೆ. ನಮ್ಮ ಸೇವೆಗೆ ಇತರರು ಉತ್ತರ ಕೊಡುವ ರೀತಿಯು ಅದನ್ನು ಒಳ್ಳೆಯದನ್ನಾಗಿ ಮಾಡುವಂಥದ್ದಲ್ಲ. ನಾವು ಸೇವೆ ಮಾಡಬೇಕು ಮತ್ತು ಪರಿಣಾಮಗಳನ್ನು ನಿರ್ಣಯಿಸಲಿಕ್ಕೆ ದೇವರಿಗೆ ಬಿಡಬೇಕು.

ನಾನು ಒಂದು ಭಾಗವಾಗಿರುವ ಸಭೆಗೆ "ಆತನ ಮನೆ" ಎಂದು ಕರೆಯಲ್ಪಡುವ ಒಂದು ದೊಡ್ಡ ಪರೋಪಕಾರದ ಸೇವೆಯಿರುತ್ತದೆ: ಅದು ಕೊರತೆಯಲ್ಲಿರುವವರಿಗೆ ಆಹಾರವನ್ನೂ ಬಟ್ಟೆಯನ್ನೂ ಒದಗಿಸುತ್ತದೆ. ಕೆಲವು ಸಲ ಜನರು ಸುಳ್ಳು ಹೇಳಿ, ನಮ್ಮ ಉದಾರತೆಯನ್ನು ದುರುಪಯೋಗ ಪಡಿಸಿಕೊಂಡದ್ದನ್ನು ಕಂಡು ಕೊಂಡಿದ್ದೇವೆ. ಇದು ನಮ್ಮ ಸೇವೆಯ ಮೌಲ್ಯವನ್ನು ಕಡಿಮೆ ಮಾಡುವುದೋ? ಇಲ್ಲವೇ ಇಲ್ಲ! ನಾವು ಬುದ್ಧಿವಂತರಾಗಲು ಬಯಸು ತ್ತೇವೆ. ಮತ್ತು ನಮ್ಮ ಕಾಣಿಕೆಗಳನ್ನು ಮಧ್ಯಪಾನಗಳನ್ನು, ಅಮಲು ತರಿಸುವ ವಸ್ತುಗಳನ್ನು ಕೊಂಡು ಕೊಳ್ಳಲು ಉಪಯೋಗಿಸುವವರಿಗೆ ಕೊಡುವದರಲ್ಲಿ ನಾವು ನಂಬುವದಿಲ್ಲ. ಹೀಗಿ ದ್ದರೂ, ನಾವು ತಪ್ಪು ಮಾಡುತ್ತೇವೆ, ನಂಬಿಕೆ ಮತ್ತು ಉದಾರತೆಯ ಪಕ್ಷವಾಗಿ ಹಾಗೆ ಮಾಡುವದನ್ನು ಆಯ್ದುಕೊಳ್ಳುತ್ತೇವೆ. ಕೆಲವರು ನಮ್ಮ ಉಪಯೋಗಗಳನ್ನು ತೆಗೆದುಕೊಂಡರೂ, ಸೇವೆ ಮಾಡುವದನ್ನು ಮುಂದುವರಿಸುವುದು ಪ್ರಾಮುಖ್ಯವಾದದ್ದಾಗಿದೆ. ಆ ರಾತ್ರಿ ಯೇಸುವು ಯೂದನ ಮತ್ತು ಪೇತ್ರನ ಪಾದಗಳನ್ನು ತೊಳೆದ ಕಾರಣದಿಂದ, ಜನರು ಕೆಲವು ಸಲ ನಮ್ಮ ಸೇವೆಯನ್ನು ದುರುಪಯೋಗ ಪಡಿಸಿಕೊಂಡರೂ, ನಮ್ಮ ಕಾಣಿಕೆಗಳನ್ನು ಮುಂದುವರಿಸಲಿಕ್ಕೆ ಪ್ರೋತ್ಸಾಹಿಸಲ್ಪಟ್ಟಿವೆ. ಕ್ರೈಸ್ತರಿಗೆ ಸೇವೆಯು ಪ್ರಾಥಮಿಕವಾಗಿ ಪರಿಣಾಮಗಳು ಕಡೆಗೆ ನೋಡು ವದಾಗಿರುವದಿಲ್ಲ; ಅದು ಯೇಸುವಿನ ಕಡೆಗೆ ನೋಡುವುದಾಗಿರುತ್ತದೆ!

ಮಿಶನರಿಗಳು ಈ ತತ್ವದ ಇನ್ನೊಂದು ಉದಾಹರಣೆಯಾಗಿದ್ದಾರೆ. ಸುವಾರ್ತೆಯ ಪ್ರಸಾರಣೆಗೆ ಹೋಗುವ ಮೊದಲು ಕೆಲವರು ತಮ್ಮನ್ನು ತಿರಸ್ಕರಿಸುವರು, ಇತರರು ತಮ್ಮನ್ನು ಉಪಯೋಗಿ ಸುವರು ಮತ್ತು ಕೆಲವರು ತಮ್ಮನ್ನು ಶಪಿಸಬಹುದು ಎಂದು ಅರ್ಥಮಾಡಿಕೊಂಡಿರುವರು. ಅದರ ಹೋಗುವಿಕೆಯ ಪರಿಣಾಮದ ಮೇಲೆ ಅವಲಂಬಿಸಿರುವದಿಲ್ಲ, ಪರಿಣಾಮಗಳು ಏನೇ ಆದರೂ ಹೋಗುವುದು ಸರಿಯಾದ ಸಂಗತಿಯಾಗಿದ್ದುದರಿಂದ ಅವರು ಹೋಗುವರು.

## ಸೇವೆಯು ಮೊದಲು ಸೇವೆ ಮಾಡಿಸಿಕೊಳ್ಳುವದನ್ನು ಕೇಳುವುದು (13:6-10)

ಯೇಸುವು ಪೇತ್ರನ ಬಳಿಗೆ ಬಂದು ಅವನ ಪಾದಗಳನ್ನು ತೊಳೆಯಲು ಪ್ರಾರಂಭಿಸಿದಾಗ, ಪೇತ್ರನು ತಡೆದು, "ಸ್ವಾಮೀ, ನೀನು ನನ್ನ ಕಾಲುಗಳನ್ನು ತೊಳೆಯ ಬೇಕೇ?" ಎಂದು ಹೇಳಿ ದನು (13:6). ಯೇಸುವು ಪೇತ್ರನಿಗೆ ತಾನು ಮಾಡುತ್ತಿದ್ದುದನ್ನು ಆ ಸಮಯದಲ್ಲಿ ಪೇತ್ರನು ಅರ್ಥಮಾಡಿಕೊಳ್ಳುವದಿಲ್ಲ ಆದರೆ ಅಂತಿಮವಾಗಿ ಅರ್ಥಮಾಡಿಕೊಳ್ಳುವನು ಎಂದು ಹೇಳಿ ದನು. ಪೇತ್ರನು ಇನ್ನೂ ಅಡ್ಡಿ ಪಡಿಸಿದನು ಮತ್ತು ಯೇಸುವು ತನ್ನ ಪಾದಗಳನ್ನು ತೊಳೆ

ಯಬಾರದೆಂದು ಒತ್ತಿ ಹೇಳಿದನು. "ನಾನು ನಿನ್ನನ್ನು ತೊಳೆಯದಿದ್ದರೆ ನನ್ನ ಸಂಗಡ ನಿನಗೆ ಪಾಲಿಲ್ಲ" (13:8) ಎಂದು ಯೇಸು ಹೇಳಿದಾಗ, ಅದು ಪೇತ್ರನು ಆಘಾತಕ್ಕೊಳಪಡಿಸಿರ ಬಹದು ಇದು ಯೇಸುವಿಗೆ ಯಾಕೆ ಮಹತ್ವದ್ದಾಗಿದೆಯೆಂದು ಅವನು ಅರ್ಥಮಾಡಿಕೊಳ್ಳದಿದ್ದರೂ ಅದು ಮಹತ್ವದ್ದಾಗಿದೆಯೆಂದು ಅವನು ಅರ್ಥಮಾಡಿಕೊಂಡನು. ಯಾವಾಗಲೂ ಆತುರ ಪಡುವವನಾದ ಪೇತ್ರನು, ತನ್ನ ಇಡೀ ದೇಹವನ್ನು ತೊಳೆಯಬೇಕೆಂದು ಯೇಸುವನ್ನು ಕೇಳಿಕೊಂಡನು!

ಪೇತ್ರನಿಗೆ ಯೇಸುವಿನ ಮಾತುಗಳು ದೇವರೊಂದಿಗಿನ ನಮ್ಮ ಸಂಬಂಧದಲ್ಲಿ ಆತ್ಮಿಕ ಸ್ವಾವಲಂಭನೆಯು ಹೇಗೆ ನಾಶಕರವಾದದ್ದಗಿರುವದೆಂಬುದನ್ನು ಪ್ರಕಟಿಸುತ್ತದೆ ನಾವು ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಂಡಿದ್ದೇವೆಂದು ಯೋಚಿಸುತ್ತಿರುವವರೆಗೆ, ನಾವು ದೇವರ ಕಡೆಗೆ ಕೃತಜ್ಞತೆ ಮತ್ತು ದೀನತೆಯೊಂದಿಗೆ ತುಂಬಿಸಲ್ಪಟ್ಟಿರುವದಿಲ್ಲ. ಅದರ ಪರಿಣಾಮವಾಗಿ, ಇತರರ ಸೇವೆ ಮಾಡುವದಕ್ಕಾಗಿ ನಮಗೆ ಅಪೇಕ್ಷೆಯಾಗಲೀ ಇಲ್ಲವೇ ಪ್ರೇರಣೆಯಾಗಲೀ ಇರುವದಿಲ್ಲ. ಅಂಥ ಸಂಗತಿಯಲ್ಲಿ ನಾವು ನಮ್ಮನ್ನು ಸ್ವಂತ ದೇವರನ್ನಾಗಿ ಮಾಡಿಕೊಳ್ಳುತ್ತೇವೆ! ಇನ್ನೊಂದು ಕಡೆಯಲ್ಲಿ ನಾವು ದೇವರ ಅದ್ಭುತಕರ ವಾದ ಕೃಪೆಯಿಂದ ಮಾತ್ರ ರಕ್ಷಿಸಲ್ಪಟ್ಟಿದ್ದೇವೆ ಎಂದು ಅರಿತುಕೊಳ್ಳುವಾಗ, ನಾವು ಕೃತಜ್ಞತೆಯುಳ್ಳವರೂ, ದೀನತೆಯುಳ್ಳವರೂ ಮತ್ತು ನಮ್ಮ ರಕ್ಷಕನ ಉದಾಹರಣೆಯನ್ನು ಅನುಸರಿಸಲು ಸಿದ್ಧರಾದವರೂ ಆಗುತ್ತೇವೆ. ಒಂದು ಚಿಂತಿಸದ ಸಭೆಯನ್ನು ಇತರರಿಗೆ ಸೇವೆ ಮಾಡಲು ನಾವು ಹೇಗೆ ಪ್ರೇರಿಸುವೆವು? ಬೈಯುವದರಿಂದಲ್ಲ ಇಲ್ಲವೇ ಪೇಚಿಗೆ ಸಿಲುಕಿಸುವದರಿಂದಲ್ಲ ಆದರೆ ಶಿಲುಬೆಯ ಮೇಲೆ ಯೇಸುವು "ಅವರ ಪಾದಗಳನ್ನು ತೊಳೆದದ್ದನ್ನು" ಅವರ ಜ್ಞಾಪಕಕ್ಕೆ ತರುವದರಿಂದ ಮಾಡಬಹುದು. ಯೇಸುವಿನ ಯಜ್ಞದಿಂದ ಸೇವೆ ಮಾಡವುದು ನಿಜವಾದ ಕ್ರೈಸ್ತ ಸೇವೆಯ ಕಡೆಗೆ ಅಗತ್ಯವಾದ ಮೊದಲನೆಯ ಹೆಜ್ಜೆಯಾಗಿದೆ.

ಯೋಹಾನನ ಸುವಾರ್ತೆಯಲ್ಲಿ ಬಹಳ ಸಲ ಯೇಸುವನ್ನು ಒಳಗೊಂಡಿರುವ ಸಂವಾದ ಗಳಿಗೆ ಹಲವಾರು ಭಿನ್ನವಾದ ಅರ್ಥಗಳು ಒಂದೇ ಸಮಯದಲ್ಲಿ ಇರುತ್ತವೆ. ಇದು 13:1-17ರಲ್ಲಿ ಸಂಭವಿಸುತ್ತಲಿದೆ. ಮೊದಲನೆಯದು, ಶಿಷ್ಯರ ಪಾದಗಳನ್ನು ತೊಳೆಯುವುದು ತಮ್ಮ ಕೊಳೆ ಯಾದ ಪಾದಗಳನ್ನು ಒಬ್ಬರಿಗೊಬ್ಬರು ವಿರುದ್ಧವಾಗಿಟ್ಟು ಒರಗಿಕೊಂಡಿರುವಾಗ ಊಟ ಮಾಡುತ್ತಿರುವ ಒಂದು ಗುಂಪು ಜನರಿಗೆ ಒದಗಿಸಲ್ಪಟ್ಟ ದಯೆಯ ಮತ್ತು ಆತಿಥ್ಯದ ಒಂದು ಕೃತ್ಯವಾಗಿದೆ. ಆಳವಾದ ಮಟ್ಟದಲ್ಲಿ, ಯೇಸುವು ಶಿಷ್ಯರಿಗೆ ತಾನು ಸೇವಕನಾಗಿದ್ದೇನೆ ಮತ್ತು ತನ್ನನ್ನು ಹಿಂಬಾಲಿಸುವವರು ಸಹ ಸೇವೆ ಮಾಡಲು ಸಿದ್ಧರಾಗಿರಬೇಕು ಎಂದು ಬೋಧಿಸಲು ಸಂದರ್ಭವನ್ನು ಉಪಯೋಗಿಸಿದನು. ಸಂಭಾಷಣೆಯೊಳಗೆ ಯೂದನು ಯೇಸುವನ್ನು ಹಿಡಿದು ಕೊಡುವನು ಎಂಬ ಇನ್ನೊಂದು ಸೂಚನೆಯು ಹೆಣೆಯಲ್ಪಟ್ಟಿತ್ತು (13:10, 11).

## ಸೇವೆಯು ಅನುಕರಣೆಯಾಗಿದೆ (13:12-16)

ಯೇಸುವು ಆತಂಕಕ್ಕೊಳಗಾಗಿದ್ದ ತನ್ನ ಶಿಷ್ಯರ ಪಾದಗಳನ್ನು ತೊಳೆಯುವದನ್ನು ಮುಗಿಸಿದ ನಂತರ, ಆತನು ತನ್ನ ಸ್ಥಳವನ್ನು ಮೇಜಿನ ಬಳಿಯಲ್ಲಿ ತೆಗೆದು ಕೊಂಡನು. ಯೇಸುವು ಏನಾದರನ್ನು ಹೇಳುವದನ್ನು ಕೇಳುವಂತೆ ಶಿಷ್ಯರು ಕಾದುಕೊಂಡಿದ್ದಾಗ ಮೌನತೆ ಆವರಿಸಿತ್ತು. ಅಂತಿಮವಾಗಿ ಆತನು ಅವರಿಗೆ, "ನಾನು ನಿಮಗೆ ಮಾಡಿದ್ದು ಏನೆಂದು ಗೊತ್ತಾಯಿತೋ?" (13:12) ಎಂದು ಕೇಳಿದನು. ಆತನ ಮುಂದಿನ ಮಾತುಗಳು ಊಟದ ಪರಿಸ್ಥಿತಿಗೆ ಮಾತಾಡುವಂತೆ ಮಾತ್ರ ಇರದೇ, ಅವು ಇಂದು ನಮಗೂ ಮಾತಾಡುತ್ತವೆ:

> "ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವುದು ಸರಿ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು

ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆ ಯುವ ಹಂಗಿನವರಾಗಿದ್ದೀರಿ. ನಾನು ನಿಮಗೆ ಮಾಡಿದ ಮೇಲೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ. ದಣಿಗಿಂತ ಆಳು ದೊಡ್ಡವನಲ್ಲ, ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ" (13:13-16).

ಯೇಸುವು ಸೇವೆ ಮಾಡಿದನು! ಆತನು ನಮ್ಮ ಒಡೆಯನು ಆದುದರಿಂದ ನಾವು ಆತನ ಹಾಗಿರಬೇಕಾದರೆ ನಾವು ಇತರರ ಸೇವೆ ಮಾಡಬೇಕು!

ಯೇಸುವಿನ ಹೆಸರಿನಲ್ಲಿ ಸೇವೆ ಮಾಡಿದವರ "ಶೂರರ" ಉದಾಹರಣೆಗಳನ್ನು ಈ ಅಧ್ಯಯನದಲ್ಲಿ ಉಪಯೋಗಿಸಿರುವದಿಲ್ಲ. ಯೇಸುವಿನ ಸೇವೆ ಮಾಡುವುದು ಕೇವಲ ಭಿನ್ನವಾಗಿರುವ ಶೂರರಿಗಾಗಿ, ಅತೀ ಹೆಚ್ಚು ವರವುಳ್ಳವರಿಗಾಗಿ, ಇಲ್ಲವೇ ವಿಶೇಷವಾಗಿ ಕಠಿಣವಾದ ಪರಿಸ್ಥಿತಿಗೊಳಗಾದವರಿಗಾಗಿ ಮಾತ್ರ ಇರುವದೆಂಬ ಪ್ರಭಾವವನ್ನು ಬೀರಲು ನಾನು ಬಯಸುವದಿಲ್ಲ. ಯೇಸುವು ನಮ್ಮೆಲ್ಲರನ್ನೂ (ನಮ್ಮಲ್ಲಿ ಹೆಚ್ಚಾದವರು ಸಾಮಾನ್ಯ ಜೀವಿತಗಳನ್ನು ನಡಿಸುತ್ತೇವೆ) ನಮ್ಮ ಮನೆಗಳಲ್ಲಿ ಮತ್ತು ಸಭೆಗಳಲ್ಲಿ ನಮ್ಮ ಕೆಲಸಗಳಲ್ಲಿ ಇಲ್ಲವೇ ಇತರರ "ಪಾದಗಳನ್ನು ತೊಳೆಯುವ" ಅವಕಾಶ ನಮಗಿರುವ ಎಲ್ಲಾ ಕಡೆಗಳಲ್ಲಿ ಜನರಿಗೆ ಸೇವೆ ಮಾಡುವದರಿಂದ ತನ್ನನ್ನು ಹಿಂಬಾಲಿಸಬೇಕೆಂದು ಕರೆಯುತ್ತಾನೆ. ಹಾಗೆ ಮಾಡುವುದು ಕ್ರೈಸ್ತರಾದ ನಮಗೆ ವಿಚಿತ್ರವಾದದ್ದಾಗಿರುವದಿಲ್ಲ. ಅದು ಕೇವಲ ಯೇಸುವಿನ ಉದಾಹರಣೆಯನ್ನು ಅನುಸರಿಸುವ ವಿಷಯವಾಗಿದೆ.

## ಸೇವೆಯು ಮಾಡುವವದರ ಬಗೆಗೆ ಇರತ್ತದೆ (13:17)

ಇಪ್ಪತ್ತು ವರ್ಷಗಳ ಹಿಂದೆ, ನಾನು ಯುನಿವರ್ಸಿಟಿಯ ವಿದ್ಯಾರ್ಥಿಯಾಗಿದ್ದಾಗ, ನನ್ನ ಕ್ರೈಸ್ತ ಸ್ನೇಹಿತರು ಮತ್ತು ನಾನು ಸೇವೆಯ ಬಗ್ಗೆ ಬಹಳವಾಗಿ ಮಾತಾಡಿದೆವು. ಶಿಷ್ಯರ ಪಾದಗಳನ್ನು ತೊಳೆದ ಯೇಸುವಿನ ಕಥೆಯು ನಮ್ಮ ಚರ್ಚೆಗೆ ಮೆಚ್ಚಿಗೆಯುಳ್ಳ ವಿಷಯವಾಗಿತ್ತು. ನಮ್ಮ ಯೌವನದ ಹಟಮಾರಿತನದಲ್ಲಿ, ಬಹಳ ಕಾಲ ಮರೆತು ಹೋಗಿರುವ ಯೇಸುವಿನ ಬೋಧನೆಯನ್ನು "ಕಂಡು ಕೊಂಡಿದ್ದೇವೆ" ಎಂದು ನಾವು ಯೋಚಿಸಿದೆವು. ವರ್ಷಗಳ ನಂತರ ಈಗ, ನನ್ನ ಸ್ನೇಹಿತರು ಮತ್ತು ನಾನು ಸೇವೆ ಮಾಡುವದಕ್ಕಿಂತ ಸೇವೆಯ ಬಗ್ಗೆ ಮಾತಾಡುವುದು ಬಹಳ ಸುಲಭ ಎಂಬುದನ್ನು ಕಂಡುಕೊಂಡಿದ್ದೇವೆ. ಸೇವೆಯನ್ನು ರೂಢಿಸುವದಕ್ಕಿಂತ ಹೆಚ್ಚಾಗಿ ಸೇವೆಯು ಚರ್ಚಿಸಲ್ಪಡುತ್ತಿರುವುದನ್ನು ಕೇಳುವುದು ಹೆಚ್ಚು ಸಾಮಾನ್ಯವಾಗಿರುತ್ತದೆ. ಸೇವೆಯ "ಮಾತು ಮಾತಿಗಿಂತ" ಹೆಚ್ಚಾಗಿ ನಾವು ಮಾಡಬೇಕೆಂದು ಯೇಸುವು ಬಯಸುತ್ತಾನೆ; ಹಾಗೆಯೇ ಆತನು "ನಡೆಯನ್ನು ನಡೆಯಿರಿ" ಎಂದು ನಮ್ಮನ್ನು ಕರೆಯುತ್ತಾನೆ. ಇತರರ ಸೇವೆ ಮಾಡುವ ತನ್ನ ಉದಾಹರಣೆಯನ್ನು ಅವರು ಅನುಕರಿಸಬೇಕೆಂದು ಆತನು ತನ್ನ ಶಿಷ್ಯರಿಗೆ ಹೇಳಿದ ನಂತರ, "ನೀವು ಇದನ್ನು ತಿಳಿದು ಕೊಂಡು ಇದರಂತೆ ಮಾಡಿದರೆ ನೀವು ಧನ್ಯರು" (13:17) ಎಂದು ಯೇಸು ಹೇಳಿದನು. ಅನಂತರದಲ್ಲಿ ಯಾಕೋಬನು ಇದೇ ಬೋಧನೆಯನ್ನು ಹೇಳಿದನು: "ವಾಕ್ಯದ ಪ್ರಕಾರ ನಡೆಯುವವರಾಗಿರಿ, ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋಬ 1:22).

ಸೇವೆಯ ವ್ಯಾವಹಾರಿಕ ಭಾಗವು ದಕ್ಷಿಣ ಆಫ್ರಿಕಾದ ಸುಮಾರು ಹನ್ನೊಂದು ವರ್ಷದ ಬಾಲಕಿಯ ಈ ಮುಂದಿನ ಕಥೆಯಲ್ಲಿ ಉದಾಹರಿಸಲ್ಪಟ್ಟಿದೆ. ಆಕೆ ಒಬ್ಬ ಬಡ ಒಕ್ಕಲಿಗನ ಮಗಳಾಗಿದ್ದಳು. ಈ ಬಾಲಕಿಯು ಕೇವಲ ಹನ್ನೊಂದು ವರ್ಷ ಪ್ರಾಯದವಳಾಗಿದ್ದಾಗ ಈಕೆಯ ತಾಯಿಯು ಸತ್ತು ಹೋದಳು. ಈಕೆಯು ಕುಟುಂಬದಲ್ಲಿ ಹಿರಿಯಳು ಮತ್ತು ಇನ್ನಿಬ್ಬರು ಚಿಕ್ಕ ಮಕ್ಕಳಿದ್ದರು. ಈಕೆಯು ಬೇಗನೇ ಇತರರಿಗೆ "ಮಮ್ಮಿ" ಆದಳು. ಆಕೆ ಅತಿಯಾದ

ಜವಬ್ದಾರಿಕೆಗಳಿಂದ ಕೆಲಸ ಮಾಡಿದ್ದರಿಂದ ಆಕೆಯ ಆರೋಗ್ಯ ಕೆಟ್ಟು ಹೋಯಿತು ಮತ್ತು ಚಿಕಿತ್ಸೆಗಾಗಿ ಒಂದು ಮಿಶನ್ ಆಸ್ಪತ್ರೆಗೆ ಒಯ್ಯಲ್ಪಟ್ಟಳು. ಆಕೆ ಆಸ್ಪತ್ರೆಯಲ್ಲಿದ್ದಾಗ ಸದ್ಭಾವನೆಯುಳ್ಳ ಒಬ್ಬ ಕ್ರೈಸ್ತ ಮಹಿಳೆಯು ಆಕೆಯನ್ನು ಸಂದರ್ಶಿಸಿದಾಗ, "ನೀನು ದೇವಾಲಯಕ್ಕೆ ಹೋಗುವಿಯೋ?" ಎಂದು ಪ್ರಶ್ನಿಸಿದಳು. "ಇಲ್ಲ, ಅಮ್ಮಾ" ಎಂದು ಬಾಲಕಿಯು ಉತ್ತರ ಕೊಟ್ಟಳು. "ನೀನು ಎಂದಾದರೂ ಸಂಡೇಸ್ಕೂಲಿಗೆ ಹೋಗಿರುವಿಯಾ?" ಎಂದು ಆ ಮಹಿಳೆ ಪ್ರಶ್ನಿಸಿದಳು. "ಇಲ್ಲ, ಅಮ್ಮಾ" ಎಂದು ಬಾಲಕಿ ಉತ್ತರ ಕೊಟ್ಟಳು. "ಹಾಗಾದರೆ, ನೀನು ಸಾಯುವಾಗ ದೇವರಿಗೆ ಏನನ್ನು ಹೇಳುವಿ?" ಎಂದು ಆ ಸಂದರ್ಶಕಳು ಮುಂದರಿದು ಕೇಳಿದಳು. ಬಲಹೀನ ತೆಯಿಂದ ಆ ಬಾಲಕಿಯು ತನ್ನ ಬಿಳಿ ಹೊದಿಕೆಯೊಳಗಿಂದ ತನ್ನ ಕೈಗಳನ್ನು ಹೊರಗೆ ತೆಗೆದು, "ಅಮ್ಮಾ, ನಾನು ನನ್ನ ಕೈಗಳನ್ನು ಆತನಿಗೆ ತೋರಿಸುವೆನು" ಎಂದು ಹೇಳಿದಳು. ಆಕೆಯು ನಿಜವಾಗಿಯೂ ಒಬ್ಬ ಸೇವಕಿಯಾಗಿದ್ದಾಳೆ. ಆಕೆಯ ಜೀವನ ಮತ್ತು ಮಾತುಗಳು, ಸೇವೆಯ ಬಗ್ಗೆ ಕೇವಲ ಮಾತಾಡುವುದು ಮಹತ್ವದ್ದಾಗಿರುವದಿಲ್ಲ, ಆದರೆ ಸೇವೆ ಮಾಡುವದು ಮಹತ್ವದ್ದಾಗಿದೆ ಎಂಬುದನ್ನು ನಮ್ಮ ಜ್ಞಾಪಕಕ್ಕೆ ತರುತ್ತವೆ!

## ಮುಕ್ತಾಯ

ಶಿಷ್ಯರ ಪಾದಗಳನ್ನು ತೊಳೆಯುವದನ್ನು ಯೇಸುವು ಮುಗಿಸಿದಾಗ, ಆತನು ಟವಲನ್ನು ತೆಗೆದಿಟ್ಟನು, ಆದರೆ ಆತನು ಎಂದೂ ಸೇವೆ ಮಾಡುವದನ್ನು ನಿಲ್ಲಿಸಲಿಲ್ಲ. ಮರುದಿನ ಒರಟಾದ ರೋಮನ್ ಶಿಲುಬೆಯನ್ನು ಎತ್ತಿಕೊಂಡನು ಮತ್ತು ಸಂತೋಷದಿಂದ ನಮಗಾಗಿ ಮರಣ ಹೊಂದಿದನು. ಕೈಪಾವುಡ ಮತ್ತು ಶಿಲುಬೆ ಎರಡೂ ಯೇಸುವಿನ ಜೀವನಕ್ಕೆ ಯೋಗ್ಯವಾದ ಸಂಕೇತಗಳಾಗಿವೆ. ಅವೆರಡೂ ತ್ಯಾಗದ ಸಂಕೇತಗಳಾಗಿವೆ. ಅವೆರಡೂ ಕೊಳೆಯಾದದ್ದು ಶುದ್ಧೀಕರಿಸಲ್ಪಡ ಬಹುದೆಂದು ಜ್ಞಾಪಕಕ್ಕೆ ತರುತ್ತದೆ. ಅವೆರಡೂ ನಮಗಾಗಿ ತನ್ನ ಪ್ರೀತಿಯನ್ನು ಪ್ರದರ್ಶಿಸಲು ಯೇಸುವಿನಿಂದ ಉಪಯೋಗಿಸಲ್ಪಟ್ಟವು. ಮತ್ತು ಅವೆರಡೂ ನಮ್ಮ ಕರ್ತನಾದ ಯೇಸುವಿನ ಉದಾಹರಣೆಯನ್ನು ಅನುಕರಿಸಲು ನಮ್ಮನ್ನು ಆಮಂತ್ರಿಸುತ್ತವೆ. ನೀನು ನಿನ್ನ ಕೈಪಾವುಡವನ್ನು ಮತ್ತು ನಿನ್ನ ಶಿಲುಬೆಯನ್ನು ತೆಗೆದುಕೊಂಡು (ಮಾರ್ಕ 8:43) ಇಂದು ಯೇಸುವನ್ನು ಹಿಂಬಾಲಿಸುವಿಯೇ?

---

ಟಿಪ್ಪಣಿಗಳು

[1]ನೋಡಿರಿ 12:1. [2]ಯೇಸುವು ಮತ್ತು ಆತನ ಯೆರೂಸಲೇಮಿಗೆ ಪ್ರಯಾಣ ಮಾಡುತ್ತಿದ್ದಾಗ ಶಿಷ್ಯರ ಮಧ್ಯದಲ್ಲಿ "ದೊಡ್ಡವರು" ಯಾರು ಎಂಬ ಚರ್ಚೆಯು ನಡೆದಿತ್ತೆಂದು ಮತ್ತಾಯ 20:20-28 ಮತ್ತು ಮಾರ್ಕ 10:35-45 ಸೂಚಿಸುತ್ತದೆ.